

# ಹೂವಿನಕೊಳ್ಳದಲ್ಲಿ ಜಲಪಾತಗಳೇ ದಳಗಳು

**ಬೆಳಗಾವಿ ಜಿಲ್ಲೆಯ ಹೂವಿನಕೊಳ್ಳ ಜಲಪಾತಗಳ ಗುಚ್ಛ. ಕಣ್ತುಂಬಿಕೊಳ್ಳುವುದಷ್ಟೇ ಅಲ್ಲ, ಈ ಜಲಧಾರೆಗಳಲ್ಲಿ ಮೀಯಲೂಬಹುದು.**

■ ಗೌರಮ್ಮ ಕಟ್ಟಿಮನಿ



ನೀರರಳಿ ಹೂವಾದರೆ ಹೇಗಿರುತ್ತದೆ? ಹೂವಿನಕೊಳ್ಳವಾಗುತ್ತದೆ ಎಂದು ಉತ್ತರಿಸಬಹುದೇನೊ?

ಈ 'ಹೂವಿನಕೊಳ್ಳ' ಬೆಳಗಾವಿ ಜಿಲ್ಲೆಯ ರಾಮದುರ್ಗ ಪಟ್ಟಣದ ಹೊರವಲಯದಲ್ಲಿದೆ; ಕುರುಚಲು ಕಾಡಿನ ಗುಡ್ಡಗಳ ನಡುವೆಯಿದೆ. ಐದಾರು ಕಿರು ಜಲಪಾತಗಳ ಗುಚ್ಛ ಹೂವಿನಕೊಳ್ಳ.

ಹೂವಿನಕೊಳ್ಳದ ಪರಿಸರಕ್ಕೆ ವಾಹನಗಳಿಗೆ ಪ್ರವೇಶವಿಲ್ಲ. ಹಾಗಾಗಿ, ಜಲಪಾತ ನೋಡಲು ಬರುವವರಿಗೆ ಟ್ರೆಕ್ಕಿಂಗ್ ಮಾಡಿದ ಅನುಭವವೂ ಲಭ್ಯ. ಎರಡು ಮೂರು ಕಿ.ಮೀ. ಅಂತರದ ಹಸುರು ಹಾದಿಯಲ್ಲಿ ಅಲ್ಲಲ್ಲಿ ಕಿರು ಜಲಪಾತಗಳು ಸಿಗುತ್ತವೆ. ದಟ್ಟ ಹಸುರು, ತಣ್ಣನೆ ಗಾಳಿ ಮೈಮನಗಳಿಗೆ ಮುದ ನೀಡುತ್ತದೆ. ನೀರಿನ ಹರಿವಿನ ಪ್ರಮಾಣ ಕಡಿಮೆ ಇರುವ ಸಂದರ್ಭದಲ್ಲಿ ನೀರಲ್ಲಿ ಮಿಂದೇಳಲೂಬಹುದು. ಆದರೂ, ಮಳೆ ದಿನಗಳಲ್ಲಿ ಹೆಚ್ಚು ಮುಂದೆ ಹೋಗದಿರುವುದೇ ಒಳಿತು.

ಹೂವಿನಕೊಳ್ಳ ತಲುಪಲು ಹಳ್ಳದ ನೀರಿನಲ್ಲೇ ನಡೆದುಕೊಂಡು ಹೋಗುವುದು ವಿಶಿಷ್ಟ ಅನುಭವ ನೀಡುತ್ತದೆ. ಒಂದೆಡೆ ಕಿರು ಜಲಪಾತಗಳನ್ನು ಕಣ್ತುಂಬಿಕೊಳ್ಳಬಹುದು, ಮತ್ತೊಂದೆಡೆ ಕಿರು ಜಲಪಾತದ ಮುಂದೆ ವಿಶಾಲವಾದ ನೈಸರ್ಗಿಕ ಈಜುಕೊಳವಿದ್ದು, ನೋಡುಗರ ಕಣ್ಮನ ಸೆಳೆಯುತ್ತದೆ.

ಮುಂದೆ ಸಾಗಿದಾಗ ಹೂವಿನಕೊಳ್ಳದ ಪ್ರಮುಖ ಆಕರ್ಷಣೆಯಾದ ಜಲಪಾತ ಕೈಬೀಸಿ ಕರೆಯುತ್ತದೆ. ಎರಡು ಹಂತಗಳಲ್ಲಿ ಬೀಳುವ ನೀರು ಪ್ರವಾಸಿಗರನ್ನು ಮರುಳಾಗಿಸುತ್ತದೆ. ಇಲ್ಲಿ ಮಿಂದೇಳಬಹುದು. ಈ ಜಲಪಾತದ ತುದಿಗೆ ಏರಿ, ಅಲ್ಲಿಂದ ಮುಂದೆ ಸಾಗಿದಾಗ ಮತ್ತೊಂದು ನೈಸರ್ಗಿಕ ಈಜುಕೊಳ ಸಿಗುತ್ತದೆ, ಅಲ್ಲಿಯೂ ಸಮಯ ಕಳೆಯಬಹುದು.

ಕಲ್ಲುಬಂಡೆಗಳ ನಡುವೆ ಹರಿಯುವ ನೀರಿನ ಕೆಳಗೆ ತುಸು ಹೊತ್ತು ಕುಳಿತು ನೀರಲ್ಲಿ ಆಟವಾಡಬಹುದು. ಕುಳಿತುಕೊಳ್ಳಲು ಅನುಕೂಲವಾಗುವಂತೆ ಕಲ್ಲುಬಂಡೆಗಳಿವೆ. ಫೋಟೊಶೂಟ್‌ಗೂ ಇದು ಉತ್ತಮ ಜಾಗ. ಆದರೆ, ಹಿರಿಯ ನಾಗರಿಕರಿಗೆ ಇದು ಪ್ರಯಾಸದ ಹಾದಿ.

ಕಾಡಹಾದಿಯಾಗಿರುವುದರಿಂದ ಸ್ಥಳೀಯರೊಟ್ಟಿಗೆ ಬರುವುದು ಉತ್ತಮ. ಅವರ ಮಾರ್ಗದರ್ಶನದಲ್ಲಿ ಹೋಗುವುದರಿಂದ ಸಮಯ ವ್ಯರ್ಥವಾಗದಂತೆ ನೋಡಿಕೊಳ್ಳಬಹುದು. ಟ್ರೆಕ್ಕಿಂಗ್‌ಗೆ ಹೋಗಲು ಅನುಕೂಲವಾಗುವಂಥ ತುಸು ಸಡಿಲವಾದ ಬಟ್ಟೆ ಧರಿಸುವುದರಿಂದ ಹೆಚ್ಚು ಕಂಫರ್ಟ್ ಆಗಿ ಓಡಾಡಬಹುದು. ಬೆಲ್ಟ್ ಇರುವ ಚಪ್ಪಲಿ ಅಥವಾ ಶೂ ಧರಿಸುವುದು ಉತ್ತಮ. ಉಪಾಹಾರ, ಹಣ್ಣು, ಸ್ನ್ಯಾಕ್ಸ್ ಜೊತೆಗೆ ಕೊಂಡೊಯ್ಯಬೇಕು. ಆದರೆ ತಿಂದು ಅಲ್ಲಿಯೇ ಹಾಳೆ ಬಿಸಾಕದೆ, ಬ್ಯಾಗಿನಲ್ಲಿ ಇಟ್ಟುಕೊಳ್ಳುವುದರಿಂದ ಪ್ರಕೃತಿ ಹಾಳಾಗದಂತೆ ಎಚ್ಚರ ವಹಿಸಬಹುದು.

ಹೂವಿನಕೊಳ್ಳಕ್ಕೆ ಬಂದರೆ ಸುತ್ತಮುತ್ತ ಹಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದು. ಈ ಸ್ಥಳದ 2 ಕಿ.ಮೀ. ಅಂತರದಲ್ಲಿ ಕರ್ನಾಟಕದಲ್ಲೇ ಎರಡನೇ ಅತೀ ಎತ್ತರದ ಶಿವನ ಮೂರ್ತಿ (ರಾಮೇಶ್ವರ ಶಿವನ ಮೂರ್ತಿ) ಇದೆ. ಅಲ್ಲಿ ಆಕರ್ಷಕ ಉದ್ಯಾನ ಇದೆ. ಈಶ್ವರಕೊಳ್ಳದ ಜಲಪಾತಗಳನ್ನೂ ಕಣ್ತುಂಬಿಕೊಳ್ಳಬಹುದು. ಸಮಯವಿದ್ದರೆ ವೆಂಕಟೇಶ್ವರ ದೇವಸ್ಥಾನ, ಏಳು ಸುತ್ತಿನ ಕೋಟೆ ಹಾಗೂ ಭೂತನಾಥ ದೇವಾಲಯ ಕಿಲ್ಲಾತೊರಗಲ್ಲ, ಗೊಡಚಿ ವೀರಭದ್ರೇಶ್ವರ ದೇವಸ್ಥಾನವನ್ನು ನೋಡಬಹುದು.

ಧಾರವಾಡ ಮಾರ್ಗದಲ್ಲಿ ಬರುವವರು ಶಿರಸಂಗಿ ಕಾಳಿಕಾ ದೇವಸ್ಥಾನ, ಸವದತ್ತಿ ಯಲ್ಲಮ್ಮ, ನವಿಲುತೀರ್ಥ ಡ್ಯಾಂ, ವರವಿ ಸಿದ್ಧೇಶ್ವರ ಕೊಳ್ಳ, ಸೊಗಲ ಸೋಮೇಶ್ವರ ದೇವಸ್ಥಾನ ನೋಡಬಹುದು. ಬಾಗಲಕೋಟೆ ಮಾರ್ಗದಲ್ಲಿ ಬರುವವರು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಶಿವಯೋಗ ಮಂದಿರ, ಮಹಾಕೂಟ ಹತ್ತಿರದ ಪ್ರವಾಸಿ ಸ್ಥಳಗಳನ್ನು ವೀಕ್ಷಿಸಬಹುದು.

ಪ್ರತಿಕ್ರಿಯಿಸಿ: feedback@sudha.co.in

ಹೂವಿನಕೊಳ್ಳಕ್ಕೆ ತಲುಪಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೊರಡಿ.